ಕೈಂಯಾಗೋದು, ಮನೇಲಿ ಜಗಳ ಹತ್ತಕ್ಕೊಳ್ಳೋದು, ಏನೂ ಬೇಡ ಮಾರಾಯಾ. ಕೈ ಮುಗೀತೀನಿ...'

ಒಳಗಿದ್ದು ಎಲ್ಲಾ ಕೇಳಿಸಿಕೊಳ್ಳುತ್ತಿದ್ದ ಸವಿತಾ ರಂಗಪ್ರವೇಶ ಮಾಡಿದಳು,

'ನನ್ನನ್ನ ಅಷ್ಟು ಕೆಟ್ಟೋಳು ಅಂತ ಹೇಗೆ ಅಂದ್ಕೊಂಡ್ರಿ ಮಾವ? ನನಗೂ ಮನುಷ್ಯತ್ವ ಉಂಟು. ಮಗ ಅಪ್ಪಂಗೆ ಅವನ ಸಂಪಾದನೆಯ ದುಡ್ಡು ಖರ್ಚು ಮಾಡಿದ್ರೆ ಬೇಡ ಅನ್ನೋಳಲ್ಲ ನಾನು...'

'ಗೊತ್ತಿದೆ...' ಅನ್ನುವಂತೆ ವ್ಯಂಗ್ಯವಾಗಿ ತಲೆ ಆಡಿಸಿದ ಶಿವರಾಮ. 'ನಿನ್ನ ದರ್ಬಾರಿನಲ್ಲಿ ಮಗನ ಕೈಲಿ ದುಡ್ಡು ಉಳೀಬೇಕಲ್ಲ' ಎನ್ನುವ ಇಂಗಿತವೂ ಅವನ ಚರ್ಯೆಯಲ್ಲಿತ್ತು.

'ನಾವು ಸಸಾರ ಮಾಡ್ತೀವಿ ಅಂತ ನಿಂಗೆ ಅನ್ನಿಸ್ಬಿಟ್ಟಿದೆ ಅಲ್ವಾ ಅಪ್ಪ? ನಾವು ಎಲ್ಲಿಗೆ ಹೊರಟ್ರೂ, ಏನು ತಗೊಂಡ್ರೂ, ಮನೆಗೆ ಯಾರು ಬಂದ್ರೂ ಅದಕ್ಕೊಂದು ಅಡ್ಡ ಮಾತು ಬರುತ್ತೆ ಅಂತ ನಿನ್ನ ಸೊಸೆ ಅಂತಾಳೆ. ಖುಷಿಯಾಗಿರೋಕೆ ನಿಮ್ಮಪ್ಪಂಗೆ ಬರಲ್ಲ ಅಂತಾಳೆ. ಅವಳ ಮೂಡೇ ಹಾಳಾಗಿಬಿಡುತ್ತೆ ಅಂತ ಅವಳ ಪುಕಾರು. ದುಡ್ಡು ದುಡ್ಡು ಅಂತ ಎಲ್ಲಾದಕ್ಕೂ ದುಡ್ಡಿನ ಮುಖ ನೋಡ್ತಿದ್ರೆ ಸಂತೋಷ ಅನುಭವಿಸೋದು ಯಾವಾಗ ಅಂತ ಅವಳು ಅಂತಾಳೆ...' ಪ್ರಸನ್ನ ಅಪ್ಪನ ತಪ್ಪಭಿಪ್ರಾಯವನ್ನು ದೂರ ಮಾಡಲು ಇಷ್ಟು ಮಾತಾಡಿದ್ದು ಶಿವರಾಮನಿಗೆ ಹೆಚ್ಚಾಯ್ತು.

'ನಾವು ಹಳೆಗಾಲದೋರು ಇರೋದೇ ಹೀಗೆ ಮಾರಾಯಾ. ನಾವು ಮಾತಾಡೋದೇ ಹೀಗೆ. ಆಯ್ತಲ್ಲ, ಇನ್ಮೇಲೆ ನಿಮಗೆ ಹೇಗೆ ಬೇಕೋ ಹಾಗೆ ನಿಶ್ಚಿಂತೆಯಾಗಿದ್ಬಿಡಿ...'

'ಅರ್ಥ ಮಾಡ್ಕೋ ಅಪ್ಪಾ'

ಬೇರೆ ಮಾತು ಬೇಡ ಅನ್ನುವಂತೆ ಶಿವರಾಮ ಬಲಗೈಯನ್ನು ಅಡ್ಡ ಹಿಡಿದ. ಆಗಲಿ, ಎಷ್ಟು ದಿನ ಇಬ್ಬರೇ ಕಾಲ ಹಾಕ್ತಾರೆ ನೋಡಿಯೇಬಿಡೋಣ... ಎಂದು ಪ್ರಸನ್ನನಿಗೂ ಅನಿಸಿರಬೇಕು.

'ನೀನು ನಿರ್ಧಾರ ಮಾಡ್ಬಿಟ್ಟಿದ್ದಿ, ಆಯ್ತು. ನಿಂಗೆ ಬೇಕಾದ ವ್ಯವಸ್ಥೆ ನಾನು ಮಾಡ್ಕೊಡ್ತೀನಿ. ಪುರುಸೊತ್ತಾದಾಗ ಬಂದು, ಹೋಗಿ ಮಾಡ್ತೀನಿ. ನಾನು ಕಳಿಸೋ ದುಡ್ಡನ್ನ ಬೇಡ ಅನ್ಬಾರ್ದು ನೀನು. ಅಗತ್ಯಕ್ಕೆ ಉಪಯೋಗಿಸ್ಕೋಬೇಕು...'

'ಅಂಥಾ ಅಗತ್ಯ ಬಿದ್ರೆ ನಾನೇ ಕೇಳ್ತೀನಿ. ಈಗ ನೀನು ದುಡ್ಡು ಕಳಿಸಿದ್ರೂ ಅದರಲ್ಲಿ ನಯಾಪೈಸೆ ನಾನು ಮುಟ್ಟೋನಲ್ಲ. ಎಲ್ಲಾ ಮೊಮ್ಮಗನ ಹೆಸರಲ್ಲಿ ಠೇವಣಿ ಹಾಕಿಡ್ತೀನಿ. ಸುಮ್ನೆ ಯಾಕೆ ತಾಪತ್ರಯ ಮಾಡ್ಕಂತಿ?'

ಮುಂದೆ ಮಾತಾಡಲಿಲ್ಲ ಪ್ರಸನ್ನ. ಆಡುವಂಥಾದ್ದು ಏನೂ ಇರಲಿಲ್ಲ. ಆದರೆ ಈ ಅಪ್ಪನ ಮಾತು ಕೇಳಿ ಚಿನ್ನ ಗಿನ್ನ ಜೊತೆಯಲ್ಲಿ ತೆಗೆದುಕೊಂಡು ಹೋಗಲು ಬಿಡುವುದಿಲ್ಲ, ನಿಷ್ಠುರವಾದರೂ ಸೈ ಎಂದು ಅವನು ಮನಸ್ಸಲ್ಲೇ ತೀರ್ಮಾನ ಮಾಡಿಕೊಂಡ. ಅದನ್ನೇ ಅಪ್ಪನಿಗೂ ಹೇಳಿದ,

'ಸದ್ಯಕ್ಕೆ ನಿನ್ನ ಪಾಲಿನ ಚಿನ್ನ ಇಲ್ಲಿ ಬಿದ್ದಿರ್ಲಿ. ಬೇಕು ಅಂತ ನೀನು ಕೇಳಿದ ತಕ್ಷಣ ತಂದುಕೊಟ್ರೆ ಸೈಯಲ್ಲ?'

ತೀರಾ ಹಟ ಹಿಡಿಯಲಿಲ್ಲ ಶಿವರಾಮ. ಅವನಿಗೂ ಅಭದ್ರತೆಯ ಭಾವನೆ ಕಾಡಿರಬಹುದು. ಅಥವಾ ತಮ್ಮನಿಗೆ ಮೋಸ ಮಾಡಿ ಎಲ್ಲಾ ಒಳಗೆ ಹಾಕಿಕೊಂಡ ಪಾಪಪ್ರಜ್ಞೆ? ಏನೋ ಒಂದು.

ಬಾಡಿಗೆ ಮನೆ ಮಾಡಿ ಅಪ್ಪನನ್ನು ಹುಟ್ಟೂರಿನ ಹತ್ತಿರದ ಪೇಟೆಯಲ್ಲಿ ಪ್ರತಿಷ್ಠಾಪಿಸುವುದು ಪ್ರಸನ್ನನಿಗೆ ನೀರು ಕುಡಿದಷ್ಟು ಸುಲಭ. ಅಲ್ಲಿ ಅವನ ಗೆಳೆಯರ ಬಳಗ ದೊಡ್ಡದಿದ್ದಂತೆ ಶಿವರಾಮನ ಪರಿಚಯದವರ ಬಳಗವೂ ಸಾಕಷ್ಟಿತ್ತು.

ಸಣ್ಣ ಮನೆ, ಸಣ್ಣ ಮನೆ ಎಂದು ಶಿವರಾಮ ಉರು ಹಾಕುತ್ತಿದ್ದ. ಉಂಡ ಹಾಗಲ್ಲ, ತಿಂದ ಹಾಗಲ್ಲ, ಇರುವ ದುಡ್ಡನ್ನು ಬಾಡಿಗೆಮನೆಯ ಮೇಲೆ ಸುರಿಯಲು ಅವನು ಸಿದ್ಧನಿರಲಿಲ್ಲ. ಎಷ್ಟು ದೊಡ್ಡ ಅರಮನೆ ಕಟ್ಟಿಕೊಂಡರೇನು, ಕಾಲು ಚಾಚಿ ಮಲಗಲು ಬೇಕಾಗಿರುವುದು ಒಂದು ಸಣ್ಣ ಮೂಲೆ. 'ಎಷ್ಟು ದುಡಿದು ಗುಡ್ಡೆ ಹಾಕಿಟ್ಟರೇನು, ತಿನ್ನಲು ಬೇಕಾಗಿರುವುದು ಒಂದು ಮುಷ್ಟಿ ಅನ್ನ' ಎಂದು ಎಲ್ಲೋ ಓದಿದ ಮಾತು ಅವನ ತಲೆಯೊಳಗೆ ಮೊಳೆ ಹೊಡೆದಂತೆ ಕೂತುಬಿಟ್ಟಿತ್ತು. ಅಪ್ಪ, ಮಗ ಇಬ್ಬರ ಸಂಪರ್ಕವೂ ಕೆಲಸ ಮಾಡಿತು. ಶಿವರಾಮನಿಗೆ ಅವನ ಆರ್ಥಿಕ ಲೆಕ್ಕಾಚಾರದ ಅಳವಿನಲ್ಲಿ ಒಂದು ಬಾಡಿಗೆಮನೆ ಸಿಕ್ಕಿತು. ಇನ್ನು ಗಂಟು–ಮೂಟೆ ಕಟ್ಟಿಕೊಂಡು ಹೊರಡುವುದೊಂದು ಬಾಕಿ. ಒಳ್ಳೇ ದಿನ ನೋಡಿ ಹೊರಡುವ ಶಿವರಾಮನ ಮಾತು ಕೇಳಿ ಸೀತಾಲಕ್ಷ್ಮಿಗೆ ವಿಚಿತ್ರ ಅನಿಸುತ್ತಿತ್ತು. ಇನ್ನು ಒಳ್ಳೆಯದಾಗುವುದಕ್ಕೆ ಏನು ಉಳಿದುಕೊಂಡಿದೆ? ಇನ್ನೇನಿದ್ದರೂ ಹೆಚ್ಚಿನ ಕಷ್ಟ ಕೊಡದೆ, ಯಾರ ಕಾಲಬುಡಕ್ಕೂ ಬೀಳುವ ಹಾಗೆ ಮಾಡದೆ, ನರಳಿಸದೆ ಮೇಲೆ ಕರೆಸಿಕೋ ಎನ್ನುವ ಮೊರೆ. ಅಪ್ಪ, ಅಮ್ಮನನ್ನು ಪ್ರಸನ್ನ ಕಾರಿನಲ್ಲಿ ಕರೆದುಕೊಂಡು ಹೋಗಿ ಬಿಟ್ಟು ಬರುವ ಯೋಜನೆ ಹಾಕಿಕೊಂಡಿದ್ದ. ಸೀತಾಲಕ್ಷ್ಮಿಗೆ ಇವತ್ತಿಗೂ ಕರುಳು ಹಿಂಡುವ ಒಂದು ಸಂದರ್ಭದ ನೆನಪು ಅಂದರೆ ಅಮ್ಮನ ಸೊಂಟದಲ್ಲಿದ್ದ ಮಗು ಅನಿರುದ್ಧ ತಾನೂ ಜೊತೆಗೆ ಬರುತ್ತೇನೆಂದು ಸೀತಾಲಕ್ಷ್ಮಿಯ ಕಡೆ ತುಯ್ಯುತ್ತಾ, 'ದದ್ದಮ್ಮಾ... ದದ್ದಮ್ಮಾ...' ಎಂದು ತೇಕುತ್ತಾ ಅಳುತ್ತಿದ್ದುದು. ಆ ಅಳು ಇನ್ನೂ ಅವಳ ಕಿವಿಯಲ್ಲಿ ಉಳಿದುಕೊಂಡಿದೆ ಮತ್ತು ನೆನವರಿಕೆಯಾದಾಗಲೊಮ್ಮೆ ಕಣ್ಣಲ್ಲಿ ಹನಿಗೂಡುವಂತೆ ಮಾಡುತ್ತದೆ. ಕೆಲವು ನೆನಪುಗಳೇ ಹಾಗೆ. ಅವು ಯಾವತ್ತೂ ಸಾಯುವುದಿಲ್ಲ. ಅವುಗಳನ್ನು ನೆನೆದರೆ ಇಂಥಾದ್ದೆಂದು ಬಾಯಲ್ಲಿ ವ್ಯಕ್ತಪಡಿಸಲು ಬರದ ಭಾವನೆಯ ಸೆಳಕೊಂದು ಮನದಾಳದಲ್ಲಿ ಮಿಂಚಿ ಹೋಗುತ್ತದೆ. ಹೃದಯ ತುಂಬಿ ಬಂದಂತಾಗುತ್ತದೆ.

ಪ್ರಸನ್ನ ಎರಡು ದಿನ ಅಪ್ಪ–ಅಮ್ಮನ ಜೊತೆಗಿದ್ದು ಅಗತ್ಯಕ್ಕೆ ಬೇಕಾದ ಪಾತ್ರೆಪರಡಿಗಳನ್ನು ಖರೀದಿಸಲು ನೆರವು ನೀಡಿದ. ಬ್ಯಾಂಕಿನಲ್ಲಿ ಅಪ್ಪನ ಅಕೌಂಟ್ ತೆಗೆಸಿ ಆ ಖಾತೆಗೆ ಬಡ್ಡಿ ದುಡ್ಡು ಮೂರು ಮೂರು ತಿಂಗಳಿಗೊಮ್ಮೆ ಜಮಾವಣೆಯಾಗುವ ವ್ಯವಸ್ಥೆ ಮಾಡಿದ. ಹೊಸಮನೆಯಲ್ಲಿ, ಅಲ್ಲಲ್ಲ, ಬಾಡಿಗೆಗೂಡಿನಲ್ಲಿ ಹಾಲುಕ್ಕಿಸಿದ ಸೀತಾಲಕ್ಷ್ಮಿ ಈ ವಯಸ್ಸಿನಲ್ಲಿ ತಾನು ಹೊಸ ಸಂಸಾರ ಹೂಡಬೇಕಾದ ಪರಿಸ್ಥಿತಿಯ ಕುರಿತು ತಳಮಳಗೊಂಡಳು. ಆಗೀಗ ಅವರಿಬ್ಬರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವ ಹೊಣೆಯನ್ನು ಪ್ರಸನ್ನ ತನ್ನ ಆಪ್ತರ ಮೇಲೆ ಹೊರಿಸಿರುವುದು ಶಿವರಾಮನಿಗೆ ಪಥ್ಯವಾಗಲಿಲ್ಲ. 'ನಂಗೂ ಬೇಕಾದವ್ರಿದಾರೆ. ನೀನು ಯಾರ್ಯಾರಿಗೋ ಹೇಳಿಡೋದು ಬೇಡ' ಎನ್ನುತ್ತಾ ಮಗನ ಕಾಳಜಿಗೆ ಕಡ್ಡಿ ಚುಚ್ಚಿದ ಶಿವರಾಮ. ಮಗ ಮರಳಿ ಹೋಗುವ ದಿನ, ಕ್ಷಣ, ಹತ್ತಿರ ಬಂದಾಗ ಮನೆಯಲ್ಲಿ ಮತ್ತೊಂದು ವಿಷಾದಪರ್ವ. 'ಹೋಗ್ಬರ್ಲಾ?' ಎಂದ ಪ್ರಸನ್ನ ಅಮ್ಮನ ಕೊರಳು ಕಟ್ಟಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದ. 'ಈಗ್ಲೂ ಕಾಲ ಮಿಂಚಿಲ್ಲ. ಬಂದ್ಬಿಡಿ ನನ್ನ ಜೊತೆ' ಅಂದ ಗದ್ಗದ ಸ್ವರದಲ್ಲಿ.

'ಅಳ್ಬೇಡ ಕಂದಾ, ಅಳ್ಬೇಡ ಬಂಗಾರ...' ಎನ್ನುತ್ತಾ, ತಾನೂ ಅಳುತ್ತಾ, ಉಟ್ಟ ಸೀರೆಯ ಸೆರಗಿನಿಂದ ಮಗನ ಕಣ್ಣೊರೆಸಿದಳು ಸೀತಾಲಕ್ಷ್ಮಿ.

'ನೋಡೋಣ, ತೀರಾ ಆಗ್ಲಿಲ್ಲ ಅಂತಾದ್ರೆ ಬರೋದೇ...' ಅನ್ನುವಾಗ ಶಿವರಾಮನ ಕಂಠ ಕೂಡಾ ಬಿಗಿಯುತ್ತಿತ್ತೇ? ಇರಬಹುದು.

***

ಸೀತಾಲಕ್ಷ್ಮಿ ಕೂಡಾ ಈಗ ಫೋನಿನಲ್ಲಿ ಮಾತನಾಡುವುದನ್ನು ಕಲಿತಿದ್ದಳು. ವಾರಕ್ಕೊಮ್ಮೆ ವಿರಾಮದ ದಿನದಂದು ಫೋನ್ ಮಾಡುತ್ತಿದ್ದ ಪ್ರಸನ್ನ. ಶಿವರಾಮನ ಹತ್ತಿರ ಮಾತಿನ ಸ್ಟಾಕು ಎಷ್ಟು ಬೇಗ ಖಾಲಿಯಾಗುತ್ತಿತ್ತು ಅಂದರೆ ಮುಂದಿನ ಮಾತನ್ನು ಹುಡುಕುವುದಕ್ಕಿಂತ ಹೆಂಡತಿಯ ಕೈಗೆ ಫೋನ್ ವರ್ಗಾಯಿಸಿಬಿಟ್ಟರೆ ಅವನಿಗೆ ನಿಶ್ಚಿಂತೆ. ಏನೇನೋ ಕಷ್ಟ–ಸುಖ ಮಾತಾಡಿಕೊಳ್ಳುತ್ತಿದ್ದರು ಅಮ್ಮ, ಮಗ. ಕೊನೆಯಲ್ಲಿ ಅನಿರುದ್ಧನ ಬಾಯಿಂದ ಒಂದೆರಡು ಮಾತಾಡಿಸಿ ಅವನ ತೊದಲುನುಡಿ ಕೇಳಿಬಿಟ್ಟರೆ ಸೀತಾಲಕ್ಷ್ಮಿಗೆ ಸಂತೃಪ್ತಿ. ಅಪರೂಪಕ್ಕೆ ಸೊಸೆ ಕೂಡಾ ಮಾತಾಡುವುದಿತ್ತು. ನೋಡಬೇಕೆಂದಾಗಲೆಲ್ಲಾ ಬಂದು ಹೋಗುವಷ್ಟು ಹತ್ತಿರ ಅಲ್ಲ. ಕಾರಲ್ಲಿ ಬರುವುದಾದರೂ ಆರೇಳು ಗಂಟೆಗಳ ಪ್ರಯಾಣ.

'ಯಾವಾಗ ಬರ್ತಿ? ಎಲ್ರೂ ಒಂದ್ಸಲ ಬನ್ನಿ...' ಅನ್ನುತ್ತಿದ್ದಳು ಸೀತಾಲಕ್ಷ್ಮಿ.

'ನೋಡೋಣ, ಪುರುಸೊತ್ತಾಗ್ಬೇಕಲ್ಲ' ಅನ್ನುತ್ತಿದ್ದ ಮಗ.

ಪುರುಸೊತ್ತು, ಅದೊಂದೇ ದುಬಾರಿಯಾಗಿದ್ದಿದ್ದು. ದುಡ್ಡು ಕೊಟ್ಟರೆ ಬೇರೆ ಎಲ್ಲಾ ಸಿಗುತ್ತಿತ್ತು ಬೆಂಗಳೂರು ಪೇಟೆಯಲ್ಲಿ.

ಒಂದು ಮನೆ ಎಂದು ಮಾಡಿಕೊಂಡ ಮೇಲೆ ಯಾವುದು ಬೇಕು? ಯಾವುದು ಬೇಡ? ಹಿಟ್ಟು ಸಾಣಿಸುವ ಸಾರಣಿಯಿಂದ ಹಿಡಿದು ತುರಿಮಣೆಯವರೆಗೆ ಎಲ್ಲವೂ ಬೇಕು. ಅಗತ್ಯ ಬಿದ್ದಾಗ ನೆನಪಾಗುವ ನಿತ್ಯೋಪಯೋಗಿ ವಸ್ತುಗಳನ್ನು ಸೀತಾಲಕ್ಷ್ಮಿ ಹೇಳುವುದು, ಶಿವರಾಮ ಪೇಪರು ತುಂಡಿನಲ್ಲಿ ಅದನ್ನು ಗುರುತು ಹಾಕಿಕೊಳ್ಳುವುದು, ಬೆಳಗಿನ ತಿಂಡಿ ಮುಗಿದ ಮೇಲೆ ಅಂಗಡಿಗೆ ಹೋಗಿ ಕೊಂಡು ತರುವುದು. ಬೇಕಾದ್ದೆಲ್ಲಾ ಜೋಡಿಸಿಕೊಂಡು ಅಣಿಮಾಡಿಟ್ಟುಕೊಳ್ಳಲು